

ಮಣ್ಣು ಬಾಯಾರಿದೊಡೆ...



ಮನೆಗೆ ನೀರು ಹೊಂಚುವುದು ಮನೆ ಮಂದಿ ಎಲ್ಲರ ಕೆಲಸ



ಮೂರ್ನಾಲ್ಕು ಕಿ.ಮೀ. ದೂರ ಬಂದ ನಂತರವೂ ದೊರೆಯುವುದು ಈ ನೀರಷ್ಟೇ...

ಕುಡಿಯಲಿಕ್ಕೆಂದು ರಾಡಿ ನೀರನ್ನೇ ಸಂಗ್ರಹಿಸಿಕೊಂಡು ಹೋಗುತ್ತಾರೆ. ಸೈಕಲ್, ಬೈಕುಗಳಲ್ಲಿ ಕೊಡಗಳೊಂದಿಗೆ ಬಂದು ನೀರು ತುಂಬಿಸಿಕೊಂಡು ಹೋಗುತ್ತಾರೆ.

ತುಂಬಿದ ಕೊಡಗಳನ್ನು ಹೇರಿಕೊಂಡು ಕಚ್ಚಾ ರಸ್ತೆಗಳಲ್ಲಿಯೇ ಬೈಕ್ ಚಲಾಯಿಸುತ್ತ ಸಾಗುವ ಜನರ ಕಸರತ್ತನ್ನು ನೋಡಿದರೆ, ಯಾವ ಕ್ಷಣದಲ್ಲಿ ಬೈಕ್ ಸವಾರ ಆಯ ತಪ್ಪಿ ಬೀಳುತ್ತಾನೋ ಅನ್ನಿಸದಿರದು. ವಾಹನವಿಲ್ಲದ ಕೆಲವೊಬ್ಬರಂತೂ ಕೊಡಗಳನ್ನು ಹೊತ್ತೇ ಸಾಗುತ್ತಾರೆ. ಅಲ್ಲಿಯವರಿಗೆ ಇದು ನಿತ್ಯದ ಅನಿವಾರ್ಯ ಕಾಯಕ.

ಸರ್ಕಾರಿ ಅಧಿಕಾರಿಗಳ, ಜನಪ್ರತಿನಿಧಿಗಳ ಸಭೆಗಳಲ್ಲಿ, ಜಿಲ್ಲೆಯಲ್ಲಿ ನೀರಿನ ಸಮಸ್ಯೆ ಇರುವ ಯಾವುದೇ ಗ್ರಾಮವಿಲ್ಲ ಎನ್ನುವ ಉತ್ತರ ಸಾಮಾನ್ಯ. ರಾಡಿ ನೀರಿಗಾಗಿ ಜೀವ ಬಸಿಯುವ ಜನರು ಜಿಲ್ಲಾಡಳಿತದ ಕಣ್ಣಿಗೆ ಬೀಳುವುದಿಲ್ಲ. 'ಜಲ ಜೀವನ್ ಮಿಷನ್' ಅಡಿ ಗ್ರಾಮೀಣ ಭಾಗದ ಎಲ್ಲ ಮನೆಗಳಿಗೂ ಮೀಟರ್ ಸಮೇತ ನೀರಿನ ನಲ್ಲಿಗಳನ್ನು ಕೂಡಿಸಿದ್ದೇವೆ ಎನ್ನುವುದು ಅಧಿಕಾರಿಗಳ ಬಡಾಯಿ. ಆ ನಲ್ಲಿಗಳಲ್ಲಿ ಎಂದಾದರೂ ನೀರು ಬಂದಿದೆಯೇ? ಪರೀಕ್ಷಿಸುವ ಗೊಡವೆ ಯಾರಿಗೆ ಬೇಕು?

ಪ್ರತಿಕ್ರಿಯಿಸಿ: feedback@sudha.co.in